ಕರ್ನಾಟಕ ವಿಧಾನಸಭೆ

ಬುಧವಾರ 18ನೇ ಜುಲೈ 2001 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 37 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಶ್ರೀ ಎಂ.ಪಿ.ವೆಂಕಟಪ್ಪ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

೧. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಗುಲ್ಬರ್ಗ ಜಿಲ್ಲೆಯಲ್ಲಿ 2001-2002ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಕೇಂದ್ರ ನಿಗದಿ ಪಡಿಸಿರುವ ಅನುದಾನ.

196(2392)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 2001-2002ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಯೋಜನೆಯಡಿಯಲ್ಲಿ ನೂರು ಲಕ್ಷ ರೂಪಾಯಿ ಮಂಜೂರಾಗಿರುವುದು ನಿಜವೇ?

2. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಯಾವ ಯಾವ ರಸ್ತೆಗೆ ಹಣ ಮಂಜೂರಾಗಿದೆ: ರಸ್ತೆವಾರು ಏವರ ನೀಡುವುದು. ಈ ಕೆಲಸ ನಿರ್ವಹಣೆಯನ್ನು ಈವರೆಗೆ ಕೆಲಸ ಪ್ರಾರಂಭ ಮಾಡದೇ ವಿಳಂಬವಾಗಲು ಕಾರಣವೇನು: ಯಾರಿಗೆ ವಹಿಸಲಾಗಿದೆ.

3. ಈ ರಸ್ತೆಯ ಕೆಲಸಗಳನ್ನು ಸಮಾಯಾನುಸಾರ ಪೂರ್ತಿ ಮಾಡಿ ನಾಗರೀಕರಿಗೆ ಅನುಕೂಲ ಮಾಡಿಕೊಡಲಾಗುವುದೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 2001-02ನೇ ಸಾಲಿಗೆ ಅನುದಾನ ನಿಗಧಿಯಾಗಿರುವ ಬಗ್ಗೆ ಕೇಂದ್ರ ಸರ್ಕಾರದಿಂದ ನಿರ್ದೇಶನ

ಬಂದಿರುವುದಿಲ್ಲ.

2. 2001-02ನೇ ಸಾಲಿನಲ್ಲಿ ಈವರೆಗೂ ಯೋಜನೆ ತಯಾರಿಸದೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

2000-01ನೇ ಸಾಲಿನಲ್ಲಿ ಸೇಡಂ ತಾಲ್ಲೂಕಿನ ಮೋತಕಪಲ್ಲಿಯಿಂದ ಮೇಡಕ್ ರಸ್ತೆ ಅಂದಾಜು ವೆಚ್ಚ ರೂ. 78.73 ಲಕ್ಷ ಸೇರ್ಪಡೆಯಾಗಿದ್ದು, ಈಗಾಗಲೇ ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಲಾಗಿದೆ. ಹಣವನ್ನು ಬಿಡುಗಡೆ ಮಾಡಲಾಗಿದೆ. 2000-01ನೇ ಸಾಲಿನ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಯೋಜನಾ ವರದಿ ಕೇಂದ್ರಿಯ ರಸ್ತೆ ಸಂಶೋಧನಾ ಸಂಸ್ಥೆ ನವ ದೆಹಲಿ ಇವರಿಂದ ದಿನಾಂಕ 8-7-2001 ರಂದು ಅನುಮೋದನೆಯಾಗಿದೆ. ಆದ್ದರಿಂದ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬ ಆಗಿರುವುದಿಲ್ಲ.

3. ಮಾಡಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೆ, 2000-2001ನೇ ಸಾಲಿನಲ್ಲಿ 100 ಲಕ್ಷದ ಮಂಜೂರಿ ಎಂದು ಎರಡು ರಸ್ತೆಗಳ ಅಂದಾಜು ಪಟ್ಟಿಯನ್ನು ಕಳುಹಿಸಲಾಗಿತ್ತು. ಆದರೆ ಮೋತಕಪಲ್ಲಿ - ಮೇಡಕ್ ರಸ್ತೆ ಮಾತ್ರ ಸೇರ್ಪಡೆಯಾಗಿದೆ ಎಂದು ತಿಳಿಸಿದ್ದಾರೆ. ಇನ್ನೊಂದು ರಸ್ತೆ ಜಿ.ಕೆ.ರೋಡ್‌ನಿಂದ ಬೀರನಹಳ್ಳಿಯವರೆಗೆ ರಸ್ತೆ ಕಾಮಗಾರಿ ಏಕೆ ಸೇರ್ಪಡೆಯಾಗಿಲ್ಲ?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಎಷ್ಟು ವಿವರಗಳನ್ನು ಕೊಡಲಿಕ್ಕೆ ಸಾಧ್ಯವೋ ಅಷ್ಟು ವಿವರಗಳನ್ನು ಕೊಟ್ಟಿದ್ದೇವೆ. ತಾವು ಸಡಕ್ ಯೋಜನೆಯ ಬಗ್ಗೆ ಪ್ರಶ್ನೆ ಕೇಳಿದ್ದೀರೆಂದು ನನಗೆ ಅರ್ಥವಾಗುತ್ತದೆ. ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯಡಿಯಲ್ಲಿ ಸೇಡಂ ತಾಲ್ಲೂಕಿನಲ್ಲಿ ಮೋತಕಪಲ್ಲಿಯಿಂದ ಮೇಡಕ್‌ವರೆಗೆ ರಸ್ತೆ ಕೆಲಸಕ್ಕಾಗಿ ಸುಮಾರು 78 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿರುವುದರಿಂದ ಆ ಕೆಲಸ ಈಗಾಗಲೇ ಪ್ರಾರಂಭವಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಅದು ನೂರು ಲಕ್ಷದ ಯೋಜನೆ.

ಶ್ರೀ ಎಂ.ವೈ.ಘೋರ್ಪಡೆ: ನೂರು ಲಕ್ಷದ ಯೋಜನೆಗೂ ಇದಕ್ಕೂ ಸಂಬಂಧವಿಲ್ಲ. ನೂರು ಲಕ್ಷದ ಯೋಜನೆ ಇದು ನಮ್ಮ ಸರ್ಕಾರ ಮಾಡಿರತಕ್ಕಂಥದ್ದು, ಇದರ ಬಗ್ಗೆ ವಿವರ ಬೇಕೆಂದರೆ ಕೊಡಬಹುದು. ಅದರಡಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ 40, 50, 60 ಲಕ್ಷದ ಕೆಲಸ ತಮ್ಮ ತಾಲ್ಲೂಕಿನಲ್ಲಿ ಆಗಿದೆ. ನೀವು ಬಹುಶಃ ಈ ಯೋಜನೆ ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಕನ್‌ಫ್ಯೂಸ್ ಮಾಡಿಕೊಂಡಿದ್ದೀರಿ.

ನೀವು ಇವೆರಡನ್ನು ಸೇರಿ ಕೇಳುತ್ತಿದ್ದೀರಿ. ಸಡಕ್ ಯೋಜನೆಯನ್ವಯ ಮೋತಕಪಲ್ಲಿಯಿಂದ ಮೇಡಕ್‌ವರೆಗೆ ಸುಮಾರು 12.2 ಕಿ.ಮೀ. ವರೆಗೆ ಈಗಾಗಲೇ ರಸ್ತೆ ಕೆಲಸ ತೆಗೆದುಕೊಂಡಿದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ತಾಲ್ಲೂಕುವಾರು ಬರುತ್ತದೆಯೇ ಅಥವಾ ಕ್ಷೇತ್ರವಾರು ಬರುತ್ತದಯೇ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸದರಿ ಯೋಜನೆಗೆ ತಾಲ್ಲೂಕುವಾರು ಗ್ರಾಂಟ್ ಕೊಡುತ್ತಾರೆಂದು ನನಗೆ ತಿಳಿದಿದೆ. ಕೆಲವು ತಾಲ್ಲೂಕುಗಳಲ್ಲಿ ಎರಡು-ಮೂರು ಕ್ಷೇತ್ರಗಳು ಸೇರಿಕೊಂಡಿರುತ್ತವೆ. ಇಂಥ ಕಡೆ ಯಾರು ಸ್ವಲ್ಪ ಜೋರಾಗಿ ಇರುತ್ತಾರೆಯೋ ಅವರ ಕ್ಷೇತ್ರಕ್ಕೆ ಜಾಸ್ತಿ ಹಣ ಹೋಗುತ್ತದೆ. ಗದಗ್ ತಾಲ್ಲೂಕಿನಲ್ಲಿ ನಮ್ಮ ಕ್ಷೇತ್ರ ಅರ್ಧದಷ್ಟು ಇದ್ದರೂ ಕೂಡ ನಮಗೆ ಸದರಿ ಯೋಜನೆ ಅಡಿಯಲ್ಲಿ ಹಣ ಕೊಟ್ಟಿಲ್ಲ. ಪೂರ್ತಿ ಹಣವನ್ನು ಗದಗ್ ಕ್ಷೇತ್ರಕ್ಕೆ ತೆಗೆದುಕೊಂಡಿದ್ದಾರೆ. ಆದ್ದರಿಂದ ಎಲ್ಲಾ ಕ್ಷೇತ್ರಕ್ಕೆ ಸಮವಾಗಿ ಹಂಚಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ 103 ಕೋಟಿ ರೂಪಾಯಿಗಳು ಇಲ್ಲಿಯವರೆಗೆ ಕೇಂದ್ರದಿಂದ ಬಂದಿದೆ. ಇದರಲ್ಲಿ ಹೆಚ್ಚು ಕಡಿಮೆ 50 ಕೋಟಿ ರೂಪಾಯಿಗಳಷ್ಟು ಕೆಲಸವನ್ನು ಜಿಲ್ಲಾ ಪಂಚಾಯತ್ ಡಿವಿಜನ್‌ನಿಂದ ನಡೆದಿದೆ. ಹಾಗೆಯೇ ಭೂ ಸೇನಾ ನಿಗಮದಿಂದ 50 ಕೋಟಿ ರೂಪಾಯಿಗಳಷ್ಟು ಕಾಮಗಾರಿ ನಡೆದಿದೆ. ಸದರಿ ಯೋಜನೆಯಲ್ಲಿ ಭಾರತ ಸರ್ಕಾರ ಮಂಜೂರಾತಿ ಮಾಡಿರತಕ್ಕಂಥ ರಸ್ತೆಗಳನ್ನು ಮಾತ್ರ ನಾವು ಮಾಡುವುದಕ್ಕೆ ಆಗುತ್ತದೆ. ಅವರ ಇಚ್ಛೆ ಪ್ರಕಾರ ತಾಲ್ಲೂಕುವಾರು ಮಾಹಿತಿಯನ್ನು ಕಳುಹಿಸಿದ್ದು, ಅವರು ತಾಲ್ಲೂಕುವಾರು ಮಂಜೂರಾತಿ ಮಾಡಿದ್ದಾರೆ. ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ 103 ಕೋಟಿ ರೂಪಾಯಿಗಳನ್ನು 175 ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಹೆಚ್ಚು ಕಡಿಮೆ 50 ಲಕ್ಷ ರೂಪಾಯಿ ಬರುತ್ತದೆ. ಇದರಲ್ಲಿ ಕೆಲವು ಕಡೆ ಮಾನ್ಯ ಸದಸ್ಯರು ಹೇಳಿರುವಂತೆ ಹೆಚ್ಚು ಕಡಿಮೆ ಆಗಿರಬಹುದು. ಇದನ್ನು ಸರಿಪಡಿಸತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ನಬಾರ್ಡ್‌ನಿಂದ ಇನ್ನು 50 ಕೋಟಿ ರೂಪಾಯಿ ಬರುತ್ತದೆ. ಈ ಹಣವನ್ನು ಹಂಚಿಕೆ ಮಾಡುವಾಗ ಈ ರೀತಿ ಎಲ್ಲೆಲ್ಲಿ ತೊಂದರೆಯಾಗಿದೆಯೋ ಅದನ್ನು ಸರಿಪಡಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಎ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ 25 ಲಕ್ಷ ರೂಪಾಯಿಗಳ ಒಂದು ಕಾಮಗಾರಿಯನ್ನು

ತೆಗೆದುಕೊಳ್ಳಬೇಕೆಂದು ಗೈಡ್‌ಲೈನ್ಸ್ ಇದೆಯೆ? ಒಂದು ವೇಳೆ ಈ ರೀತಿಯಾದ ಗೈಡ್‌ಲೈನ್ಸ್ ಇದ್ದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಮ್ಮ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿ ಕೊಡಬೇಕೆಂದು ಹೇಳಿದ್ದವು. ಒಂದು ಕೋಟಿ ರೂಪಾಯಿಗಳಿಗೆ ಹೊಂದಿಕೊಳ್ಳುವುಂತೆ 25 ಲಕ್ಷ ರೂಪಾಯಿಗಳ ನಾಲ್ಕು ಕಾಮಗಾರಿಗಳನ್ನು ಮಾಡಬೇಕೆಂದು ನಾವು ಈಗಾಗಲೇ ಪಟ್ಟಿಯನ್ನು ಸಹ ಕೊಟ್ಟಿದ್ದವು. ಆದರೆ, ಈ ಎಲ್ಲಾ ಕಾಮಗಾರಿಗಳಿಗೆ 12 ಲಕ್ಷ ರೂಪಾಯಿ ಎಂದು ಲಿಮಿಟ್ ಮಾಡಿದ್ದಾರೆ. ಇದಕ್ಕೆ ಕಾರಣ ಏನೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಂ.ವೈ.ಘೋರ್ಪಡೆ: 25 ಲಕ್ಷ ರೂಪಾಯಿ ಮಾತ್ರ ಕೊಡಬೇಕೆಂದು ನಿಯಮ ಇಲ್ಲ. ಈಗ ಭೂ ಸೇನಾ ನಿಗಮದಿಂದ ಸಡಕ್ ಯೋಜನೆಯಲ್ಲಿ 769 ಕಿ.ಮೀ. ಅಂದರೆ 205 ಪ್ಯಾಕೇಜ್‌ನಷ್ಟು ಕೆಲಸ ನಡೆದಿದೆ. ಬಾಕಿ ಉಳಿದಿರತಕ್ಕಂಥ 880 ಕಿ.ಮೀ.ಗೆ 204 ಪ್ಯಾಕೇಜ್ ಮಾಡಿ ಜಿಲ್ಲಾ ಪಂಚಾಯತ್‌ನವರು ಸದರಿ ಕೆಲಸವನ್ನು ಮಾಡುತ್ತಾರೆ. ಇದರಲ್ಲಿ ಕಟ್ಟುನಿಟ್ಟಾಗಿ ಇಷ್ಟೇ ಇರಬೇಕೆಂದು ನಿಯಮ ಇಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, 100 ಲಕ್ಷ ರೂ. ಯೋಜನೆ ಎಂದು ಸರ್ಕಾರ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಸದರಿ ಯೋಜನೆಗೆ ಒಂದು ಭಾಗ ಸರ್ಕಾರ ಹಣ ಕೊಟ್ಟರೆ ಉಳಿದ ಎರಡು ಭಾಗವನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನ ಹಣವನ್ನು ಡೈವರ್ಟ್ ಮಾಡುವುದನ್ನು ಬಿಟ್ಟರೆ ಬೇರೆ ಅನುದಾನ ಸರ್ಕಾರದಿಂದ ಕೊಟ್ಟಿಲ್ಲ. ಈ ಒಂದು ಯೋಜನೆಯ ಕಾರ್ಯಕ್ಕೆ ತಾಲ್ಲೂಕು ಪಂಚಾಯತ್‌ನಿಂದ ಕೊಡಬೇಕಾಗಿರತಕ್ಕಂಥ ಒಂದು ಭಾಗವನ್ನು ಎಲ್ಲಿಯೂ ಕೊಟ್ಟಿಲ್ಲ. ಆದ್ದರಿಂದ, ಸದರಿ ಯೋಜನೆಗೆ ಸರ್ಕಾರ ಹೆಚ್ಚಿನ ಹಣ ಒದಗಿಸುತ್ತದೆಯೇ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಶ್ರೀ ಎಂ.ವೈ.ಘೋರ್ಪಡೆ: 100 ಲಕ್ಷ ರೂ.ಯೋಜನೆಯಲ್ಲಿ ಹೆಚ್ಚು ಕಡಿಮೆ ಸುಮಾರು 40 ರಿಂದ 50 ಲಕ್ಷ ರೂಪಾಯಿ ಸರ್ಕಾರದ ಕಡೆಯಿಂದ ಹೋಗುತ್ತದೆ. ಬಾಕಿ ಹಣವನ್ನು ಸ್ಟಾಂಪ್ ಡ್ಯೂಟಿಯಿಂದ ಉಪಯೋಗಿಸಬೇಕೆಂದು ಹೇಳಿದ್ದೇವೆ. ಹಾಗೆಯೇ ಜಿಲ್ಲಾಪಂಚಾಯತ್‌ನವರೂ ಸಹ ಉಪಯೋಗಿಸಬಹುದೆಂದು ಹೇಳಿದ್ದೇವೆ. ಆದರೆ ನಾವು ಕೊಟ್ಟಿರತಕ್ಕಂಥ 40 ರಿಂದ 50 ಲಕ್ಷ ರೂಪಾಯಿಗಳಷ್ಟು ಕೆಲಸ ಆಗಿದೆ. ಕೆಲವು ಕಡೆ 60 ರಿಂದ 70 ಲಕ್ಷ ರೂಪಾಯಿಗಳಷ್ಟು ಕೆಲಸ ಆಗಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಸರ್ಕಾರ ಏನೊಂದು ಉದ್ದೇಶ ಇಟ್ಟುಕೊಂಡು 100 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಏನು ಜಾರಿಗೆ ತಂದಿದ್ದಾರೆಯೋ ಅದು

ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳುತ್ತಿಲ್ಲ. ಏಕೆಂದರೆ ಇರತಕ್ಕಂಥ ಹಣವನ್ನು ಡೈವರ್ಟ್ ಮಾಡಿ 100 ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡುವುದಾದರೆ ಹೇಗೆ? ಆದ್ದರಿಂದ ಹೊಸದಾಗಿ ಅನುದಾನವನ್ನು ಕೂಡತಕ್ಕಂಥದ್ದು ಅವಶ್ಯಕತೆ ಇದೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಸದಸ್ಯರು ಸಡಕ್ ಯೋಜನೆಯ ಬಗ್ಗೆ ಮಾತ್ರ ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟಿದ್ದೇನೆ. ಇದರ ಜೊತೆಗೆ 100 ಲಕ್ಷ ರೂಪಾಯಿಗಳ ಯೋಜನೆಯ ಬಗ್ಗೆಯೂ ಸಹ ಉತ್ತರ ಹೇಳಿದ್ದೇನೆ. ಇದರ ಬಗ್ಗೆ ಹಚ್ಚಿನ ವಿವರ ಬೇಕಾದರೆ ಪ್ರತ್ಯೇಕವಾದಂಥ ಪ್ರಶ್ನೆಯನ್ನು ಕಳುಹಿಸಿಕೊಡಲಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಪ್ರಸ್ತಾವನೆಯನ್ನು ಶಾಸಕರು ಕೊಡಬೇಕೋ ಅಥವಾ ಜಿಲ್ಲಾ ಪಂಚಾಯತ್ ಸದಸ್ಯರು ಅಥವಾ ಜಿಲ್ಲಾ ಪಂಚಾಯತ್ ಇಲಾಖೆಯವರು ಕೊಡಬೇಕೇ ಎಂಬುದರ ಬಗ್ಗೆ ಮಾನ್ಯ ಮಂತ್ರಿಯವರು ಕ್ಲಾರಿಫಿಕೇಷನ್ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. 2001-2002ನೇ ಸಾಲಿಗೆ ಸದರಿ ಯೋಜನೆಗೆ ಪ್ರಸ್ತಾವನೆಯನ್ನು ತಗೆದುಕೊಳ್ಳುವಂಥ ಹಂತದಲ್ಲಿ ಹಚ್ಚಿನ ಆದ್ಯತೆಯನ್ನು ಶಾಸಕರಿಗೂ ಕೊಡಬೇಕಾಗುತ್ತದ.

ಶ್ರೀ ಎಂ.ವೈ.ಘೋರ್ಪಡೆ: 2001-2002ನೇ ಸಾಲಿಗೆ ಕೇಂದ್ರದಿಂದ ಎಷ್ಟು ಹಣ ಬರುತ್ತದೆ ಎಂಬುದನ್ನು ನಮಗೆ ತಿಳಿಸಿಲ್ಲ. ಆದರೆ 196 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ನಾವು ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಕೆ.ಶ್ರೀನಿವಾಸಗೌಡ: ಸದರಿ ಯೋಜನೆಯಲ್ಲಿ ಇಂಥ ಕೆಲಸಗಳೇ ಮಾಡಬೇಕೆಂದು ಕೂಡತಕ್ಕಂಥ ಪಟ್ಟಿಯನ್ನು ಆಯಾಯ ಕ್ಷೇತ್ರದ ಶಾಸಕರು ಕೊಡಬೇಕೇ ಅಥವಾ ಜಿಲ್ಲಾ ಪಂಚಾಯತ್ ಸದಸ್ಯರು ಕೊಡಬೇಕೇ ಎಂಬುದನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಮಾತ್ರ ಕ್ಲಾರಿಫೈ ಮಾಡಿ.

ಶ್ರೀ ಎಂ.ವೈ.ಘೋರ್ಪಡೆ: ಜಿಲ್ಲಾ ಪಂಚಾಯತ್ ಸದಸ್ಯರು ಮತ್ತು ಆ ಜಿಲ್ಲೆಗೆ ಸಂಬಂಧಪಟ್ಟಂಥ ಶಾಸಕರು ಒಂದಡೆ ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದು ಕಾಮಗಾರಿಯ ಪಟ್ಟಿಯನ್ನು ಕೊಡಬೇಕಾಗುತ್ತದೆ.

(ಮುಂದಲ)

ಶ್ರೀ ಎಚ್.ಎಸ್.ಮಹದೇವ ಪ್ರಸಾದ್: ಎಲ್ಲವನ್ನೂ ಅವರೇ ಮಾಡುವುದಾದರೆ

ಹೇಗೆ? ಶಾಸಕರು ಯಾವರೀತಿ ಕೆಲಸ ಮಾಡುವುದಕ್ಕೆ ಆಗುತ್ತದೆ?

ಶ್ರೀ ಎ.ನಾಗರಾಜ್: 100 ಲಕ್ಷ ರೂಪಾಯಿ ಯೋಜನೆ ಅಡಿಯಲ್ಲಿ ಹಳ್ಳಿಯ ಸಂಪರ್ಕ ರಸ್ತೆ ಮಾಡತಕ್ಕಂಥ ಕೆಲಸ ಬಹಳ ಯಶಸ್ವಿಯಾಗಿ ಆಗುತ್ತಿದೆ. ಈ ಒಂದು ಯೋಜನೆಗೆ ಸರ್ಕಾರ ಮತ್ತು ಇಎಎಸ್ ಮತ್ತು ಸ್ಟಾಂಪ್ ಡ್ಯೂಟಿಯಿಂದ ಬರತಕ್ಕಂಥ ಹಣದಿಂದ ಸದರಿ ಯೋಜನೆ ಕಾರ್ಯಗತವಾಗುತ್ತಿದೆ. ಆದ್ದರಿಂದ ಈ ಯೋಜನೆಯನ್ನು ಮುಂದುವರಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಆಗಬಹುದು.

ಶ್ರೀ ಎಂ.ಎಸ್.ಆತ್ಮಾನಂದ: ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಮತ್ತು 100 ಲಕ್ಷ ರೂಪಾಯಿಗಳ ಯೋಜನೆಗಳ ಬಗ್ಗೆ ತಾಲ್ಲೂಕುವಾರು ಕಾರ್ಯಕ್ರಮ ಹಮ್ಮಿಕೊಂಡು ಅನುದಾನವನ್ನು ಬಿಡುಗಡೆ ಮಾಡುತ್ತೇವೆಂದು ಸರ್ಕಾರ ಈ ಸಭೆಯಲ್ಲಿ ತಿಳಿಸಿದೆ. ಆದರೆ ಇಲ್ಲಿ ಏನಾಗುತ್ತದೆ ಎಂದರೆ, ಮೂರ್ನಾಲ್ಕು ವಿಧಾನಸಭಾ ಕ್ಷೇತ್ರ ಇರತಕ್ಕಂಥ ಒಂದು ತಾಲ್ಲೂಕಿನಲ್ಲಿ ಅಸಮತೋಲನ ಆಗುತ್ತದೆ. ಇಂಥ ಕಡೆ ಎಲ್ಲಾ ಕ್ಷೇತ್ರಕ್ಕೆ ಸಮನಾಗಿ ಹಂಚಿಕೆಯಾಗುವುದಿಲ್ಲ. ಕೆಲವೊಂದು ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಸಿಕ್ಕಿಲ್ಲ. ಆದ್ದರಿಂದ ಕ್ಷೇತ್ರವಾರು ಆಗತಕ್ಕಂಥದ್ದು ಅವಶ್ಯಕತೆ ಇದೆ. ಜಿಲ್ಲಾ ಪಂಚಾಯತ್‌ನಲ್ಲಿ ಶಾಸಕರನ್ನು ಸದಸ್ಯರೆಂದು ಗಣನೆಗೆ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಇದೆ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜಾಪ್ರತಿನಿಧಿ ಕೂಡ ಅವರ ಜವಾಬ್ದಾರಿಯನ್ನು ನಿರ್ವಹಿಸಲೇಬೇಕಾಗುತ್ತದೆ. ಆದರೆ ಒಟ್ಟಿಗೆ ಕೂಡಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಶಾಸಕರನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನಲ್ಲಿ ನಮ್ಮನ್ನು ಹೊರತುಪಡಿಸಿ ಕಾರ್ಯಕ್ರಮ ಮಾಡತಕ್ಕಂಥ ಕೆಲಸ ನಡೆಯುತ್ತಿದೆ. ಆದ್ದರಿಂದ ಇದಕ್ಕೆ ನಿಗದಿತವಾದ ಪರಿಹಾರವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಒಂದೇ ಮಾತಿನಲ್ಲಿ ಹೇಳಬೇಕಾದರೆ, ಪಂಚಾಯತ್ ವ್ಯವಸ್ಥೆಯಲ್ಲಿ ಥ್ರೀ ಟೈರ್ ಸಿಸ್ಟಮ್ ಮೂಲಕವೇ ಎಲ್ಲಾ ಕೆಲಸ ಆಗಬೇಕೆಂದು ಕೇಂದ್ರದ ಉದ್ದೇಶ ಆಗಿದೆ. ಹಾಗೆಯೇ, ನಮ್ಮ ಉದ್ದೇಶವೂ ಕೂಡ ಇದೇ ಆಗಿದೆ. ಆದ್ದರಿಂದ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಇರುವುದರಿಂದ ತಾಲ್ಲೂಕು ಪಂಚಾಯತ್ ಯೂನಿಟ್ ಇಟ್ಟುಕೊಳ್ಳಬೇಕಾಗುತ್ತದೆ. ಈ ರೀತಿಯಾದ ವ್ಯತ್ಯಾಸಗಳು ಕ್ಷೇತ್ರ ದೃಷ್ಟಿಯಿಂದ ಆಗಿದ್ದರೆ, ಅದನ್ನು ಸರಿಪಡಿಸುವ ವಿಧಾನ ಇದೆ. ಇದನ್ನು ನಾವು ಖಂಡಿತ ಮಾಡುತ್ತೇವೆ.

ಅಧ್ಯಕ್ಷರು: ತಾವು ಒಂದು ಮಾತನ್ನು ಕೇಳಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಮೂರು ತಿಂಗಳಾದರೂ ಯಾವ ರಸ್ತೆಯನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ತೀರ್ಮಾನವಾಗುವುದಿಲ್ಲ. ಅಲ್ಲಿ ಒಬ್ಬೊಬ್ಬರು ಒಂದೊಂದು ತರಹ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಸಿ.ಚೆನ್ನಿಗಪ್ಪ: ತಾವು ಹೇಳುವುದು ನಿಜವಾಗಿದೆ. ಅಲ್ಲಿ ಗೌರವ ಸಿಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಘೋರ್ಪಡೆಯವರೇ, ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ತಿಳಿದುಕೊಂಡು ನಾನು ಸಂಜೆ ಅಥವಾ ನಾಳೆಯ ದಿವಸ ಎಲ್ಲರ ಕಳುಹಿಸಿಕೊಡುತ್ತೇನೆ. ನಂತರ ಅದನ್ನು ಸ್ಯಾರ್ಟ್‌ಪೋಟ್ ಮಾಡೋಣ.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇವು ಪಂಚಾಯಿತಿಗಳು ಪಂಚಾಯಿತಿಗಳಾಗಿಯೇ ಕುಳಿತುಕೊಂಡಿವೆ, ಅಲ್ಲಿ ಏನು ಕೆಲಸವಾಗುವುದಿಲ್ಲ. ಅಲ್ಲಿ ರಣಹಿಂಸೆಯಾಗುತ್ತಿದೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಜಿಲ್ಲಾ ಪಂಚಾಯಿತಿಗೆ ನೀವು ಸರ್ಕಾರದಿಂದ ಕೊಡುವ ಅನುದಾನದ ಬಗ್ಗೆ ಅವರು ನಮ್ಮನ್ನು ಕನ್ಸಲ್ಟ್ ಮಾಡುವುದಿಲ್ಲ. ಅವರಿಗೆ ಕೊಟ್ಟರುವುದನ್ನು ಅವರೇ ಹಂಚಿಕೊಳ್ಳುತ್ತಾರೆ, ಅದಕ್ಕೆ ನೀವು ಏನು ಮಾಡುತ್ತೀರಿ?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಯಾರು ಮಾಡಿದರೂ ಕೂಡ ಒಂದು ಪಟ್ಟಿಯನ್ನು ಮಾಡಬೇಕಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಅದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ನಂತರ ಅದು ತೀರ್ಮಾನವಾಗಬೇಕಾಗುತ್ತದೆ, ಆ ಚರ್ಚೆಯಾಗಿ ತೀರ್ಮಾನವಾದ ಮೇಲೆ ಯಾವುದೇ ಪಕ್ಷದ ಶಾಸಕರಿದ್ದರು ಅವರಿಗೆ ನಾವು ಮನ್ನಣೆಯನ್ನು ಕೊಡಬೇಕಾಗುತ್ತದೆ. ಇದೇರೀತಿಯಾಗಿ ನಾವು ಮಾಡಿಕೊಂಡು ಬಂದಿರುತ್ತೇವೆ, ಅದರಲ್ಲಿ ಏನೂ ತೊಂದರೆ ಇರುವುದಿಲ್ಲ.

ಅಧ್ಯಕ್ಷರು: ಶಾಸಕರದ್ದೇ ಅಂತಿಮ ತೀರ್ಮಾನವೆಂದು ತಾವು ಹೇಳಿ. ಶಾಸಕರ ಅಭಿಪ್ರಾಯವನ್ನು ತೆಗೆದುಕೊಂಡು ನಾನು ತಮ್ಮ ಜೊತೆ ಮಾತನಾಡುತ್ತೇನೆ.

ಶ್ರೀ ಎಂ.ವೈಘೋರ್ಪಡೆ: ಪ್ರತ್ಯೇಕವಾಗಿ ಶಾಸಕರಿಗೆ ಕೊಡುವುದು ಬಹಳ ಕಷ್ಟವಿದೆ. ಇದನ್ನು ಯಾರೂ ಒಪ್ಪಲಿಕ್ಕಿಲ್ಲ. ಎಲ್ಲರೂ ಒಂದಾಗಿ ತೀರ್ಮಾನವನ್ನು ಮಾಡಬೇಕು.

ಅಧ್ಯಕ್ಷರು: ಪ್ರತ್ಯೇಕವಾಗಿ ಎಂದು ನಾವು ಹೇಳುತ್ತಿಲ್ಲ. ಇದು ಬಹಳ ಕಾಂಪ್ಲೀಕೇಟೆಡ್ ಪ್ರಶ್ನೆಯಾಗಿದೆ, ಜಿಲ್ಲಾ ಪಂಚಾಯಿತಿಗೆ ನೀವು ಏನು ಕೊಡುತ್ತೀರಿ ಎಲ್ಲದಕ್ಕೂ ಶಾಸಕರನ್ನು ಕನ್ಸಲ್ಟ್ ಮಾಡುವಂತೆ ಅವರಿಗೆ ತಾವು ಹೇಳಿ. ಎಲ್ಲವನ್ನೂ ಅವರೇ ಹಂಚಿಕೊಳ್ಳುತ್ತಾರೆ. ನ್ಯಾಯವಾಗಿ ನೋಡಿದರೆ ಶಾಸಕರಿಗೆ ಏನೂ ಅಧಿಕಾರವೇ ಇಲ್ಲ.

(ಗೊಂದಲ)

ಶ್ರೀ ಎ.ಎಸ್.ಗುರುಸ್ವಾಮಿ: ಅಧ್ಯಕ್ಷರೆ, ತಮಗೆ ಕೈ ಮುಗಿಯುತ್ತೇನೆ, ನನಗೆ ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಇವತ್ತು ಜಿಲ್ಲಾ ಪಂಚಾಯಿತಿಗಳ ಪರಿಸ್ಥಿತಿ ಏನಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಅಭಿಪ್ರಾಯವನ್ನು ಇವತ್ತು ವ್ಯಕ್ತಪಡಿಸಿರುತ್ತೀರಿ ಎಲ್ಲಾ ಪಕ್ಷದ ಶಾಸಕರ ಒಂದು ಪರಿಸ್ಥಿತಿ ಇದಾಗಿದೆ. ನಾವು ಇವತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಒಪ್ಪಿಕೊಳ್ಳುತ್ತೇವೆ. ಆದರೆ ಆ ಹಂತದಲ್ಲಿ ಶಾಸಕರ ಒಂದು ಹಕ್ಕನ್ನು ಕೇಳುತ್ತಾರೆ, ಜನರು ದಿನನಿತ್ಯ ನಮ್ಮ ಹತ್ತಿರ ಬರುತ್ತಾರೆ. ಕೆಲಸವನ್ನು ಮಾಡಿಕೊಡಿ ಎಂದು ನಮ್ಮನ್ನು ಕೇಳುತ್ತಾರೆ. ಇಂತಹ ಕಾಮಗಾರಿ ಆಗಬೇಕೆಂದು ಹೇಳುತ್ತಾರೆ. ಇವತ್ತು ಒಬ್ಬ ಶಾಸಕನಿಗೆ ಒಂದು ರೂಪಾಯಿಯಷ್ಟು ಕಾಮಗಾರಿ ಮಾಡಿ ಎಂದು ಹೇಳುವಷ್ಟು ಹಕ್ಕು ಇರುವುದಿಲ್ಲ.

ಅಧ್ಯಕ್ಷರು: ಒಂದು ಗುಂಡು ಸೂಜಿಯಷ್ಟು ಕೆಲಸ ಮಾಡಿಸುವಷ್ಟು ಶಕ್ತಿ ಇರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಏನಾದರೂ ಒಂದು ಇತಿಮಿತಿ ಇರಲಿ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಕಾಮಗಾರಿಯ ಬಗ್ಗೆ ಏನು ಲಿಸ್ಟ್ ಮಾಡುತ್ತಾರೆ. ಆಗ ಶಾಸಕರ ಕನ್ಸಲ್ಟೇಷನ್ ತಗೆದುಕೊಂಡು ಮಾಡಿದರೆ ಆಗ ಒಂದು ಗೌರವ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಶಾಸಕರಾಗಿ ನಾವು ನಾಲ್ಕು ಮಾತುಗಳನ್ನು ಮಾತನಾಡಿ ಹೋಗುವುದಕ್ಕಾಗುತ್ತದೆಯೇ ಹೊರತು, ಕ್ಷೇತ್ರದಲ್ಲಿ ಶಾಸಕರಿಂದ ಏನೂ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು: ನಾನು ಮಾನ್ಯ ಸಚಿವರಿಗೆ ಹೇಳಿದ್ದೇನೆ, ನಿಮ್ಮ ಪರವಾಗಿ ನಾನು ಅವರ ಜೊತೆಯಲ್ಲಿ ಮಾತನಾಡುತ್ತೇನೆ.

ಶ್ರೀ ಎಂ.ಚಂದ್ರಪ್ಪ: ಮಾನ್ಯ ಅಧ್ಯಕ್ಷರೆ, 100 ಜನ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರು 50 ಸಾವಿರ ಒಂದು ಲಕ್ಷ ರೂಪಾಯಿಗಳವರೆಗೆ ಕೆಲಸವನ್ನು ತೆಗೆದುಕೊಳ್ಳುತ್ತಾರೆ. 100 ಲಕ್ಷ ರೂಪಾಯಿ ಯೋಜನೆ ಅಡಿಯಲ್ಲಿ 3-4 ದೊಡ್ಡ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆನ್ನುವುದು ಒಂದು ಒಳ್ಳೆಯ ಸ್ಕೀಂ ಆಗಿದೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಶಾಸಕರೆಲ್ಲರೂ ನಾವು ಸೇರಿದರೆ, ನನ್ನದು ಒಂದು ಕೆಲಸ, ನನ್ನದು ಒಂದು ಕೆಲಸ ಸೇರಿಸು ಎನ್ನುವುದರಿಂದ, ಈ ಸ್ಕೀಂ ಅನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ದೊಡ್ಡ ದೊಡ್ಡ ರಸ್ತೆಗಳನ್ನು ತೆಗೆದುಕೊಳ್ಳಬೇಕೆನ್ನುವ ಉದ್ದೇಶ ಇರುವುದರಿಂದ ಶಾಸಕರಿಂದಲೇ ತೆಗೆದುಕೊಳ್ಳಬೇಕೆನ್ನುವಂತೆ ಒಂದು ಆದೇಶವನ್ನು ತಾವು ಮಾಡಬೇಕು.

ಅಧ್ಯಕ್ಷರು: ನಾನು ನಿಮ್ಮೆಲ್ಲರ ಪರವಾಗಿ ಮಾತನಾಡುತ್ತೇನೆ.

ಶ್ರೀ ಜಗದೀಶ್ ಹೆಟ್ಟರ್: ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಒಂದು ಘೋಷಣೆ ಮಾಡಿದರು, ಒಬ್ಬ ಶಾಸಕರ ಕ್ಷೇತ್ರಕ್ಕೆ 25 ಲಕ್ಷ ರೂಪಾಯಿಗಳ ಅಭಿವೃದ್ಧಿ ಅನುದಾನ ಕೊಡುತ್ತೇವೆಂದು ಹೇಳಿದರು, ಆ ಹಣ ಇದುವರೆಗೆ ಬಂದಿರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿವಸಗಳ ಹಿಂದೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. 25 ಲಕ್ಷ ರೂಪಾಯಿಗಳನ್ನು ಯಾವ ರೀತಿಯಾಗಿ ಖರ್ಚು ಮಾಡಬೇಕು ಎನ್ನುವ ಬಗ್ಗೆ ಒಂದು ಗೈಡ್‌ಲೈನ್ಸ್ ಕೂಡ ಕೊಟ್ಟಿರುತ್ತೇವೆ. ತಾವು ಒಂದು ಗುಂಡುಪಿನ್‌ನಷ್ಟು ಖರ್ಚು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದಿರಲ್ಲಾ, ಇನ್ನು ಮುಂದೆ 25 ಲಕ್ಷ ರೂಪಾಯಿಗಳನ್ನು ನೀವು ಖರ್ಚು ಮಾಡಬಹುದು.

ಅಧ್ಯಕ್ಷರು: ನೀವು ಇನ್ನೂ ಹಣವನ್ನು ಕೊಟ್ಟಿಲ್ಲ, ನಾವೆಲ್ಲರೂ ಗಲಾಟೆ ಮಾಡಿರುವುದರಿಂದ 25 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ಸರ್ಕಾರಿ ಆಜ್ಞೆಯನ್ನು ಪಾಸ್ ಮಾಡಿದ್ದಾರೆ. ಹನ್ನೆರಡೂವರೆ ಲಕ್ಷ ರೂಪಾಯಿಗಳಂತೆ ಎರಡು ಕಂತುಗಳಲ್ಲಿ ಖರ್ಚು ಮಾಡಬಹುದೆನ್ನುವುದರ ಬಗ್ಗೆ ಹೊರಡಿಸಿರುವ ಗೈಡ್‌ಲೈನ್ಸ್ ನಿಮಗೆ ತಲುಪುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇದರ ಬಗ್ಗೆ ಕೇಳಬೇಕು. ಲೋಕಸಭಾ ಸದಸ್ಯರಿಗೆ ಜಿಲ್ಲೆಯಲ್ಲಿ 50 ಭಾಗದಷ್ಟು ಕೆಲಸವನ್ನು ಇಎಎಸ್ ಕೆಲಸದಲ್ಲಿ ಮೀಸಲಾಗಿಡಬೇಕೆಂದು ಒಂದು ಜಿಲ್ಲಾ ಪಂಚಾಯಿತಿಯಲ್ಲಿ ರೆಸ್‌ಲ್ಯೂಷನ್ ಮಾಡಿದ್ದಾರೆ. ಇದನ್ನು ನಾನು ನಿಮಗೆ ಒಂದು ಸಲ ಕೇಳಿದ್ದೇನೆ, ಆ